**<u>ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ, ತುಮಕೂರು</u>**

**<u>ವಿಶೇಷ ಮೊಕದ್ದಮೆ.7/2021 ಮತ್ತು 729/23</u>**

ಪ್ರಾ.ಸಾ. : **2**

ದೋ.ಸಾ. : **3**

ದಿ.**09.06.2026.**

| | |
|---|---|
| ಹೆಸರು | : ಡಾ.ವೇಣು ಆರ್.ಡಿ. |
| ತಂದೆಯ ಹೆಸರು | : ಲೇಟ್ ದಾಸಪ್ಪ |
| ವಯಸ್ಸು | : **53** ವರ್ಷ |
| ಉದ್ಯೋಗ | : ವೈದ್ಯಾಧಿಕಾರಿಗಳು, ರಾಮಗೊಂಡನಹಳ್ಳಿ ಪ್ರಾಥಮಿಕ ಆರೋಗ್ಯ ಕೇಂದ್ರ |
| ವಾಸಸ್ಥಳ | : ಮಂಜುನಾಥನಗರ, ತುಮಕೂರು |

ಸಾಕ್ಷಿಯನ್ನು ಕರೆಸಿ, ಸತ್ಯಪ್ರತಿಜ್ಞೆಯ ಪ್ರಮಾಣವಚನ ಬೋಧಿಸಲಾಯಿತು.

**<u>ಮುಖ್ಯ ವಿಚಾರಣೆ : ಮಾನ್ಯ ಸರ್ಕಾರಿ ಅಭಿಯೋಜಕರಿಂದ :</u>**

1. ನಾನು 2018 ರಿಂದ ಇಲ್ಲಿಯವರೆಗೆ ರಾಮಗೊಂಡನಹಳ್ಳಿ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ವೈದ್ಯಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.
2. ದಿ.07.09.2020 ರಂದು ಬೆಳಿಗ್ಗೆ 10.00 ಗಂಟೆಗೆ ಕೋರಾ ಪೋಲೀಸ್ ಠಾಣೆಯ ಪೋಲೀಸ್ ಉಪ ನಿರೀಕ್ಷಕರು ಒಂದು ಪತ್ರವನ್ನು ಬರೆದು ಗಾಂಜಾ ಮಾರಾಟ ಮಾಡುವ ವ್ಯಕ್ತಿಗಳನ್ನು ಹಿಡಿದಿದ್ದು, ಅವರಿಂದ ಗಾಂಜಾ ವಶಪಡಿಸಿಕೊಳ್ಳಲು ಪತ್ರಾಂಕಿತ ಅಧಿಕಾರಿಯಾಗಿ ಬಂದು ಸಹಕರಿಸಬೇಕೆಂದು ಕೋರಿಕೊಂಡರು. ಆ ಪತ್ರವನ್ನು ನೋಡುತ್ತಿದ್ದು ಅದನ್ನು ನಿಶಾನೆ ಪಿ7 ಎಂದು, ಅದರಲ್ಲಿರುವ ನನ್ನ ಸಹಿಯನ್ನು ನಿಶಾನೆ ಪಿ7(ಎ) ಎಂದು ಗುರುತಿಸಲಾಯಿತು.
3. ಬೆಳಿಗ್ಗೆ 10.15-10.30 ಗಂಟೆ ಅವಧಿಯಲ್ಲಿ ನಾನು ಕೋರಾ ಪೋಲೀಸ್ ಠಾಣೆಗೆ ಹೋಗುತ್ತಿದ್ದಾಗ ಪೋಲೀಸರು ಅಂತರಸನಹಳ್ಳಿಗೆ ಬಂದರು, ಪೋಲೀಸ್ ಜೀಪಿನಲ್ಲಿ

ಬೆಳಧರ ಕಲ್ಯಾಣ ಮಂಟಪ ಇದ್ದ ಸ್ಥಳಕ್ಕೆ ಹೋದೆವು. ನಾನು, ಪಿಎಸ್‌ಐ, ಜೀಪ್ ಡ್ರೈವರ್, ಪಿಡಿಒ ಮಂಜುನಾಥ, ಪೋಲೀಸ್ ಸಿಬ್ಬಂದಿ ಹೋದೆವು. ಹನುಮಂತಗಿರಿಯಲ್ಲಿ ನೂತನವಾಗಿ ಕಟ್ಟುತ್ತಿದ್ದ ಕಲ್ಯಾಣ ಮಂಟಪಕ್ಕೆ ಹೋದೆವು.

(ಈ ಹಂತದಲ್ಲಿ ಸರ್ಕಾರಿ ಅಭಿಯೋಜಕರು ಮುಂದುವರೆದ ಮುಖ್ಯ ವಿಚಾರಣೆಯನ್ನು ಮುಂದೂಡಲು ಕಾಲಾವಕಾಶ ಕೋರಿದ್ದು, ಶ್ರೀ.ಜಿ.ಎಸ್.ರೆಹಮಾನ್, ವಕೀಲರು ಪ್ರತಿ ಪ್ರಕರಣದಲ್ಲಿ ಈ ರೀತಿಯಾಗಿ ಸರ್ಕಾರಿ ಅಭಿಯೋೋಜಕರು ಮಾಡುತ್ತಾರೆಂದು ಆರೋಪವನ್ನು ಮಾಡಿರುತ್ತಾರೆ. ಈ ಆರೋಪದ ಬಗ್ಗೆ ಸರಿಯಾದ ಮಾಹಿತಿಯನ್ನು ಮತ್ತು ದಾಖಲಾತಿಯನ್ನು ನೀಡಿರುವುದಿಲ್ಲ. ಆ ಆರೋಪವನ್ನು ತಿರಸ್ಕರಿಸಿ, ಮುಂದುವರೆದ ಮುಖ್ಯ ವಿಚಾರಣೆಯನ್ನು ಮುಂದೂಡಲಾಯಿತು).

(ಉಕ್ತಲೇಖನದಂತೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚುಗಾರರಿಂದ ಬೆರಳಚ್ಚು ಮಾಡಲ್ಪಟ್ಟಿತು).

ಓದಿ ಹೇಳಿ ಕೇ ಸರಿ ಇದೆ ಎಂದು ಒಪ್ಪಿದ್ದಾರೆ.

ಸಹಿ/-
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ತುಮಕೂರು